**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಆರನೇ ಅಧಿವೇಶನ**

# ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–04)**

ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಪ್ರಕರಣ 10ರ ತಿದ್ದುಪಡಿ.-** ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 12)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) 10ನೇ ಪ್ರಕರಣದಲ್ಲಿ "ಐದು ವರ್ಷಗಳ" ಎಂಬ ಪದಗಳ ಬದಲಿಗೆ "ಎರಡು ವರ್ಷಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 15ರ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದ (3)ನೇ ಉಪ-ಪ್ರಕರಣದ ತರುವಾಯ ಈ ಮುಂದಿನ ಉಪ-ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(4) ಈ ಅಧಿನಿಯಮದ ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 14)ರ ಉಪಬಂಧಗಳನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ, ಕಂದಾಯ ಇಲಾಖೆ ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಥವಾ ನಗರಾಭಿವೃದ್ಧಿ ಇಲಾಖೆ ಅಥವಾ ನಗರ ಯೋಜನಾ ಇಲಾಖೆ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಸಮಾಜ ಕಲ್ಯಾಣ ಇಲಾಖೆ ಅಥವಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಥವಾ ಬುಡಕಟ್ಟು ಕಲ್ಯಾಣ ಇಲಾಖೆ ಅಥವಾ ಹಿಂದುಳಿದ ವರ್ಗಗಳ ಅಭಿವೃದ್ಧಿ

ಇಲಾಖೆಯ ಗ್ರೂಪ್ ಬಿ ಅಧಿಕಾರಿಯು ಸಂಬಂಧಪಟ್ಟ ರಿಜಿಸ್ಟ್ರಾರ್, ಸಹಾಯಕ ರಿಜಿಸ್ಟ್ರಾರ್ ಅಥವಾ ಈ ಕುರಿತು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ ವರದಿ ಮಾಡತಕ್ಕದ್ದು.

(5) ರಿಜಿಸ್ಟ್ರಾರ್, ಸಹಾಯಕ ರಿಜಿಸ್ಟ್ರಾರ್ ಅಥವಾ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಆತನ ಸ್ವಂತ ಪ್ರಸ್ತಾವ ಅಥವಾ ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅಧಿಕಾರಿಗಳು ಸಲ್ಲಿಸಿದ ವರದಿಯ ಮೇರೆಗೆ , ಈ ಅಧಿನಿಯಮದ ಉಪಬಂಧಗಳಡಿ ಕ್ರಮವನ್ನು ಕೈಗೊಳ್ಳತಕ್ಕದ್ದು."

**4. 15ಎ ಮತ್ತು 15ಬಿ ಹೊಸ ಪ್ರಕರಣಗಳ ಸೇರ್ಪಡೆ**.- ಮೂಲ ಅಧಿನಿಯಮದ 15ನೇ ಪ್ರಕರಣದ ತರುವಾಯ ಈ ಮುಂದಿನ ಹೊಸ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:-

"**15ಎ. ಒಂಬುಡ್ಸ್‌ಪರ್ಸನ್ ಮೂಲಕ ವಿವಾದಗಳ ಇತ್ಯರ್ಥಪಡಿಸುವಿಕೆ.-** ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕಾಗಿ, ಸಾಲಗಾರ ಅಥವಾ ಲೇವಾದೇವಿದಾರನ ನಡುವೆ ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಲು ಸರ್ಕಾರವು ಅಧಿಸೂಚನೆಯ ಮೂಲಕ ಒಂಬುಡ್ಸ್‌ಪರ್ಸನ್‌ನನ್ನು ನೇಮಕ ಮಾಡತಕ್ಕದ್ದು. ಇತ್ಯರ್ಥ ಮತ್ತು ಮಧ್ಯಸ್ಥಿಕೆಯ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾಂಥ ವಿಧಾನದಲ್ಲಿರತಕ್ಕದ್ದು.

**15ಬಿ. ಕುಂದುಕೊರತೆಗಳ ನಿವಾರಣಾ ವೇದಿಕೆ.-** ಸರ್ಕಾರವು ಸೂಕ್ತವಾದ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು. ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾಂಥ ವಿಧಾನದಲ್ಲಿರತಕ್ಕದ್ದು."

**5. ಪ್ರಕರಣ 37ರ ತಿದ್ದುಪಡಿ.-** (1) ಮೂಲ ಅಧಿನಿಯಮದ 37ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ,-

(ಎ) "ಆರು ತಿಂಗಳವರೆಗೆ" ಎಂಬ ಪದಗಳ ಬದಲಿಗೆ "ಹತ್ತು ವರ್ಷಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) "ಒಂದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಐದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. ಪ್ರಕರಣ 38ರ ತಿದ್ದುಪಡಿ.-** (1) ಮೂಲ ಅಧಿನಿಯಮದ 38ನೇ ಪ್ರಕರಣದಲ್ಲಿ,-

(ಎ) "ಒಂದು ವರ್ಷದವರೆಗೆ" ಎಂಬ ಪದಗಳ ಬದಲಿಗೆ "ಹತ್ತು ವರ್ಷಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) "ಐವತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಐದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. ಪ್ರಕರಣ 38ಎರ ಸೇರ್ಪಡೆ.-** (1) ಮೂಲ ಅಧಿನಿಯಮದ 38ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**38ಎ. ಬಲವಂತದ ಕ್ರಮದ ಬಳಕೆಯ ನಿಷೇಧ.-** (1) ಯಾರೇ ವ್ಯಕ್ತಿಯೂ ತಾನು ನೀಡಿದ ಯಾವುದೇ ಸಾಲದ ಮೇಲೆ ಮಿತಿಮೀರಿದ ಬಡ್ಡಿಯನ್ನು ವಿಧಿಸತಕ್ಕದ್ದಲ್ಲ.

(2) ಲೇವಾದೇವಿದಾರನು ಸಾಲಗಾರರಿಂದ ಹಣ ವಸೂಲಾತಿಗಾಗಿ ಆತನಾಗಲಿ ಅಥವಾ ಆತನ ಏಜೆಂಟರ ಮೂಲಕವಾಗಲಿ ಅಥವಾ ಆತನ ಕುಟುಂಬ ಸದಸ್ಯರಿಂದಾಗಲಿ ಯಾವುದೇ ಇತರ ಬಲವಂತದ ಕ್ರಮವನ್ನು ಬಳಸತಕ್ಕದ್ದಲ್ಲ ಮತ್ತು ಬಲವಂತ ವಸೂಲಾತಿಯ ಯಾವುದೇ ಸ್ವರೂಪಕ್ಕಾಗಿ ಈ ಅಧಿನಿಯಮದ ಉಪಬಂಧಗಳಡಿ ದಂಡನೆಗೆ ಹೊಣೆಯಾಗತಕ್ಕದ್ದು ಹಾಗೂ ಈ ಅಧಿನಿಯಮದ ಮೇರೆಗೆ ಉಪಬಂಧಿಸಲಾದಂತೆ ಅಂಥ ಲೇವಾದೇವಿದಾರನ ನೋಂದಣಿಯನ್ನು ಅಮಾನತ್ತುಪಡಿಸಲು ಅಥವಾ ರದ್ದುಪಡಿಸಲು ನೋಂದಣಿ ಪ್ರಾಧಿಕಾರಿಯು ಅಧಿಕಾರವುಳ್ಳವನಾಗಿರತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ, ಲೇವಾದೇವಿದಾರನ ಮೂಲಕ ಸಾಲಗಾರರ ವಿರುದ್ಧದ "ಬಲವಂತದ ಕ್ರಮ"ವು ಈ ಮುಂದಿನವುಗಳನ್ನು ಒಳಗೊಳ್ಳುವುದು, ಎಂದರೆ:-

(i) ಸಾಲಗಾರರನ್ನು ಅಥವಾ ಆತನ/ಆಕೆಯ ಕುಟುಂಬ ಸದಸ್ಯರಿಗೆ ಒತ್ತಡವನ್ನು ಹಾಕುವುದು ಅಥವಾ ತಡೆಯೊಡ್ಡುವುದು ಅಥವಾ ಹಿಂಸೆಯನ್ನು ಬಳಸುವುದು ಅಥವಾ ಅವಮಾನಿಸುವುದು ಅಥವಾ ಬೆದರಿಸುವುದು, ಅಥವಾ

(ii) ಸಾಲಗಾರನನ್ನು, ಆತನ/ಆಕೆಯ ಕುಟುಂಬ ಸದಸ್ಯರನ್ನು ಸ್ಥಳದಿಂದ ಸ್ಥಳಕ್ಕೆ ನಿರಂತರವಾಗಿ ಹಿಂಬಾಲಿಸುವುದು ಅಥವಾ ಆತನ/ಆಕೆಯ ಒಡೆತನದ ಅಥವಾ ಬಳಕೆಯಲ್ಲಿನ ಯಾವುದೇ ಸ್ವತ್ತಿಗೆ ಮಧ್ಯಪ್ರವೇಶಿಸುವುದು ಅಥವಾ ಆತನ/ಆಕೆಯಿಂದ ಕಿತ್ತುಕೊಳ್ಳುವುದು ಅಥವಾ ಯಾವುದೇ ಅಂಥ ಸ್ವತ್ತಿನ ಬಳಕೆಗೆ ಅಡ್ಡಿಪಡಿಸುವುದು, ಅಥವಾ

(iii) ಸಾಲಗಾರನು ವಾಸವಾಗಿರುವ ಅಥವಾ ಕೆಲಸ ಮಾಡುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಮನೆ ಅಥವಾ ಇತರ ಸ್ಥಳಕ್ಕೆ ಬಲವಂತದ ಕ್ರಮವನ್ನು ಕೈಗೊಳ್ಳುವ ಉದ್ದೇಶದಿಂದ ಆಗಾಗ ಭೇಟಿ ನೀಡುವುದು ಅಥವಾ ಭೇಟಿಯಾಗುವಂತೆ ಮಾಡುವುದು, ಅಥವಾ

(iv) ಸಾಲಗಾರನಿಗೆ ಹಣ ಪಾವತಿಗಾಗಿ ಬಲವಂತದ ಮತ್ತು ಅನುಚಿತ ಪ್ರಭಾವವನ್ನು ಬಳಸಿ ಮಾತುಕತೆಗೆ/ಒತ್ತಾಯಿಸುವುದಕ್ಕೆ ಖಾಸಗಿ ಅಥವಾ ಹೊರಗುತ್ತಿಗೆ ಅಥವಾ ಬಾಹ್ಯ ಏಜೆನ್ಸಿಗಳ, ಕ್ರಿಮಿನಲ್ ಹಿನ್ನಲೆಯುಳ್ಳವರ ಸೇವೆಯನ್ನು ಬಳಸುವುದು, ಅಥವಾ

(v) ಸರ್ಕಾರದ ಯಾವುದೇ ಕಾರ್ಯಕ್ರಮದಡಿಯಲ್ಲಿ ಸಾಲಗಾರನಿಗೆ ಪ್ರಯೋಜನದ ಹಕ್ಕುಗಳುಳ್ಳ ಯಾವುದೇ ದಸ್ತಾವೇಜನ್ನು ಸಾಲಗಾರನಿಂದ ಬಲವಂತವಾಗಿ ಪಡೆಯುವುದು."

**8. ಪ್ರಕರಣ 39ರ ತಿದ್ದುಪಡಿ.-** ಮೂಲ ಅಧಿನಿಯಮದ 39ನೇ ಪ್ರಕರಣದಲ್ಲಿ,-

(ಎ) ಖಂಡ (ಎ)ರಲ್ಲಿ,-

(i) "ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ" ಎಂಬ ಪದಗಳ ಬದಲಾಗಿ "ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಐವತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಮೂರು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಖಂಡ (ಬಿ)ರಲ್ಲಿ,-

(i) "ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ" ಎಂಬ ಪದಗಳ ಬದಲಾಗಿ "ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಒಂದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಐದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಲೈಸೆನ್ಸ್‌ಯುಕ್ತ ಲೇವಾದೇವಿದಾರ ಮತ್ತು ಲೈಸೆನ್ಸ್‌ರಹಿತ ಲೇವಾದೇವಿದಾರರು ನೀಡುವ ದುಬಾರಿ ಬಡ್ಡಿ ದರಗಳ ಅನುಚಿತ ತೊಂದರೆ ಮತ್ತು ಬಲವಂತದ ವಸೂಲಾತಿ ವಿಧಾನಗಳಿಂದ ಆರ್ಥಿಕವಾಗಿ ದುರ್ಬಲ ಗುಂಪುಗಳು ಮತ್ತು ವ್ಯಕ್ತಿಗಳನ್ನು ರಕ್ಷಿಸುವುದಕ್ಕಾಗಿ, ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 12)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 4** | (1) ಈ ಖಂಡದ ಮೂಲಕ ಸೇರಿಸಲು ಪ್ರಸ್ತಾಪಿಸಿರುವ 15-ಎ ಪ್ರಕರಣವು ಒಂಬುಡ್ಸ್ ಪರ್ಸನ್‌ನ ಮೂಲಕ ಇತ್ಯರ್ಥ ಮತ್ತು ಮಧ್ಯಸ್ಥಿಕೆಯ ವಿಧಾನಕ್ಕಾಗಿನ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ನಿಯಮಗಳ ಮೂಲಕ ನಿಯಮಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| | (2) ಈ ಖಂಡದ ಮೂಲಕ ಸೇರಿಸಲು ಪ್ರಸ್ತಾಪಿಸಿರುವ 15-ಬಿ ಪ್ರಕರಣವು ಕುಂದುಕೊರತೆ ನಿವಾರಣಾ ವೇದಿಕೆಯ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಗಾಗಿನ ಕಾರ್ಯವಿಧಾನ ಮತ್ತು ಮಾರ್ಗ ಸೂಚಿಗಳನ್ನು ನಿಯಮಗಳ ಮೂಲಕ ನಿಯಮಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕ್ಯಾತ್ಸಂದ್ರ ಎನ್. ರಾಜಣ್ಣ**
ಕೃಷಿ ಮಾರುಕಟ್ಟೆಯನ್ನು ಹೊರತುಪಡಿಸಿ
ಸಹಕಾರ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 12)

### ಉದ್ಧೃತ ಭಾಗ

**XXX XXX XXX**

**10. ಲೈಸೆನ್ಸಿನ ಅವಧಿ.-** ಲೈಸೆನ್ಸಿನ ಅವಧಿಯು, ಐದು ವರ್ಷಗಳ ಒಂದು ಅವಧಿಗೆ ಮಾನ್ಯವಾಗಿರತಕ್ಕದ್ದು:

ಪರಂತು, ಲೈಸೆನ್ಸ್ ಹೊಂದಿರುವ ಲೇವಾದೇವಿದಾರನು, 6ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದ ದಿನಾಂಕಕ್ಕಿಂತ ಮುಂಚೆ, ಅನಂತರದ ಅವಧಿಗೆ ಸಂಬಂಧಿಸಿದಂತೆ ಒಂದು ಹೊಸ ಲೈಸೆನ್ಸಿಗಾಗಿ ಅರ್ಜಿ ಸಲ್ಲಿಸಿದ್ದರೆ, ಅಂಥ ಲೇವಾದೇವಿದಾರನನ್ನು ಅವನ ಲೈಸೆನ್ಸಿನ ಅವಧಿಯು ಮುಗಿಯದಿದ್ದಾಗ್ಯೂ ಹೊಸ ಲೈಸೆನ್ಸಿಗಾಗಿ ಹಾಕಿಕೊಂಡ ಅವನ ಅರ್ಜಿಗೆ ಸಂಬಂಧಿಸಿದಂತೆ ಅವನು ಮುಂದಿನ ಆದೇಶಗಳನ್ನು ಸ್ವೀಕರಿಸುವವರೆಗೆ ಅವನು ಒಂದು ಮಾನ್ಯವಾದ ಲೈಸೆನ್ಸನ್ನು ಹೊಂದಿರುವನೆಂದು ಭಾವಿಸತಕ್ಕದ್ದು.

**XXX XXX XXX**

**37. ಬಂಧಪತ್ರ, ಮುಂತಾದವುಗಳಲ್ಲಿ ತಪ್ಪು ಮೊತ್ತವನ್ನು ನಮೂದಿಸುವುದು ಒಂದು ಅಪರಾಧ.-**

**XXX XXX XXX**

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಇವೆರಡರಿಂದಲೂ ದಂಡಿತರಾಗತಕ್ಕದ್ದು.

**XXX XXX XXX**

**38. ಉಪದ್ರವಕ್ಕಾಗಿ ದಂಡ.-** ಸಾಲ ನೀಡಿದವನು ಬಾಕಿಯಿರುವ ಸಾಲದ ವಸೂಲಿಗಾಗಿ ಸಾಲಗಾರನಿಗೆ ಉಪದ್ರವ ಕೊಡುವ ಅಥವಾ ಅದಕ್ಕೆ ಪ್ರೇರೇಪಿಸುವ ಯಾರೇ ಆದರೂ, ಅಪರಾಧ ನಿರ್ಣಯವಾದ ಮೇಲೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತರಾಗತಕ್ಕದ್ದು.

**XXX XXX XXX**

**39. ದಂಡಗಳಿಗೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು.-** ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ತಪ್ಪಿದ ಅಥವಾ ಅದನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯಾಗಲಿ, ಈ ಅಧಿನಿಯಮದಲ್ಲಿ, ಯಾವುದೇ ನಿರ್ದಿಷ್ಟ ದಂಡವನ್ನು ಉಪಬಂಧಿಸಿರದಿದ್ದಲ್ಲಿ, ಅಪರಾಧ ನಿರ್ಣಯವಾದ ಮೇಲೆ,-

(ಎ) ಮೊದಲನೇ ಅಪರಾಧಕ್ಕಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು; ಮತ್ತು

(ಬಿ) ಎರಡನೇ ಅಥವಾ ಮುಂದುವರೆದ ಅಪರಾಧಕ್ಕಾಗಿ ಎರಡು ವರ್ಷದವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತರಾಗತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500, 3ನೇ ಮಾರ್ಚ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SIXTH SESSION**

# THE KARNATAKA MONEY LENDERS (AMENDMENT) BILL, 2025

**(LA Bill No. 04 of 2025)**

A Bill further to amend the Karnataka Money Lenders Act, 1961.

Whereas, it is expedient further to amend the Karnataka Money Lenders Act, 1961 (Karnataka Act 12 of 1962) for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called the Karnataka Money Lenders (Amendment) Act, 2025.

(2) It shall come into force at once.

**2. Amendment of section 10.-** In section 10 of the Karnataka Money Lenders Act, 1961 (Karnataka Act 12 of 1962)(herein after referred to as the Principal Act) for the words "five years" the words "two years" shall be substituted.

**3. Amendment of section 15.-** In section 15 of Principal Act, after sub-section (3), the following sub- sections shall be inserted, namely:-

"(4) The Group B Officer of Revenue Department or Rural Development and Panchayath Raj Department or Urban Development Department or Town Planning Department or Woman and Child Development Department or Social Welfare Department or Minority Welfare Department or Tribal Welfare Department or Backward Classes Welfare Department shall report if any person is in contravention of the provisions of this Act and the Karnataka Prohibition of Charging Exorbitant Interest Act, 2004 (Karnataka Act No. 14 of 2004) to the concerned Registrar, Assistant Registrar or any Officer authorized by the State Government, in this behalf.

(5) The Registrar, the Assistant Registrar or any Officer authorized may on his own motion or on the report submitted by the Officers referred in sub-section (1), shall take action under the provisions of this Act."

**4. Insertion of new sections 15 A and 15 B.-** After section 15 of the Principal Act, the following new sections shall be inserted, namely,-

"**15-A. Settlement of disputes by Ombudsperson.-** The Government **shall** by notification appoint an Ombudsperson who can act as a mediator between the borrower or lender, for settling the disputes. The procedure and guidelines for the settlement and mediation shall be in the manner as may be prescribed.

**15-B. Grievances Redressal Forum.-** The Government **shall** establish suitable grievance mechanism. The procedure and guidelines for grievance mechanism shall be in the manner as may be prescribed."

**5. Amendment of section 37.-** In section 37 of Principal Act, in sub-section (2),-

(a) for the words "six months", the words "ten years", shall be substituted; and

(b) for the words "one thousand", the words "five lakh", shall be substituted.

**6. Amendment of section 38.-** In section 38 of the Principal Act,-

(a) for the words "one year", the words "ten years", shall be substituted; and

(b) for the words "fifty thousand", the words "five lakh", shall be substituted.

**7. Insertion of section 38A.-** After section 38 of the Principal Act, the following shall be inserted namely,-

**"38A. Prohibition of using coercive action.-** (1) No person shall charge exorbitant interest on any loan advanced by him.

(2) Money Lender shall not use any coercive action either by himself or by his agents or by his family members for recovery of money from the debtor and any form of coercive recovery shall be liable for punishment under the provisions of this Act and empower the Registering Authority to suspend or cancel the Registration of such Money Lender as provided under the provisions of this Act.

**Explanation:** For the purposes of this section, "coercive Action" by a Money Lender against the debtors include the following, namely:-

(i) exerting pressure or obstructing or using violence to or insulting or intimidating the debtor or his/her family members, or

(ii) persistently following the debtor, his/her family member from place to place or interfering with any property owned or used by him/her or depriving him/her of, or hindering him/her in the use of any such property, or

(iii) frequenting the house or other place where the debtor resides or works, or carries on business, or happens to be, with an intension of taking coercive action, or

(iv) using the service of private or outsource or external agencies, criminal background to negotiate/urging the debtor to make payment using coercive and undue influence, or

(v) Seeking to take forcibly any document from the debtor which entitles the debtor to a benefit under any Government programme.**”**

**8. Amendment of section 39.-** In section 39 of the Principal Act,-

(a) in clause (a),-

(i) for the words “with simple imprisonment which may extend to one year”, the words “with imprisonment which may extend to three years”, shall be substituted; and

(ii) for the words “fifty thousand rupees”, the words “three lakh”, shall be substituted.

(b) in clause (b),-

(i) for the words “with simple imprisonment which may extend to two years”, the words “with imprisonment which may extend to ten years”, shall be substituted; and

(ii) for the words “one lakh rupees”, the words “five lakh rupees”, shall be substituted.

## STATEMENT OF OBJECTS AND REASONS

It is considered necessary to amend the Karnataka Money Lenders Act, 1961 (Karnataka Act 12 of 1962) to protect economically vulnerable groups and individuals from the undue hardship usurious interests rates and coercive means of recovery by licensed money lender and unlicensed money lender.

Hence, the Bill.

## FINANCIAL MEMORANDUM

There is no extra expenditure involved in the proposed measure.

## MEMORANDUM REGARDING DELEGATED LEGISLATION

| | |
|---|---|
| **Clause 4:** | (1) Section 15-A proposes to be inserted by this clause empowers the Government to prescribe by rules the procedure and guidelines for the settlement and the manner of mediation by the Ombudsperson.<br>(2) Section 15-B proposes to be inserted by this clause empowers the Government to prescribe by rules the procedure and guidelines for grievances mechanism of the grievances redressal forum. |

The proposed delegation of Legislative power is normal in character.

**KYATHASANDRA N.RAJANNA**
Minister for Co-operation
excluding Agriculture Marketing

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA MONEY LENDERS ACT, 1961

## (KARNATAKA ACT 12 OF 1962)

**XXX XXX XXX**

**10. Term of licence.-** A licence shall be valid for a term of five years.

Provided that where a money-lender holding a licence has made an application for a fresh licence before the date prescribed under sub-section (1) of section 6, for the succeeding 1[term]1, such money-lender shall, notwithstanding the expiry of the term of his licence, be deemed to have a valid licence until orders are received by him on his application for the fresh licence.

**XXX XXX XXX**

**37. Entry of wrong sum in bond, etc., to be an offence.-**

**XXX XXX XXX**

(2) Whoever contravenes the provisions of sub-section (1) shall, on conviction, be punished with imprisonment which may extend to six months or with fine which may extend to one thousand rupees or with both.

**XXX XXX XXX**

**38. Penalty for molestation.-** Whoever molests, or abets the molestation of, a debtor for the recovery of a debt due by him to a creditor shall, on conviction, be punished with imprisonment which may extend to one year or with fine which may extend to fifty thousand rupees or with both.

**XXX XXX XXX**

**39. General provision regarding penalties.-** Whoever fails to comply with or acts in contravention of any provision of this Act, shall, if no specific penalty has been provided for in this Act, on conviction, be punished,-

(a) for the first offence with simple imprisonment which may extend to one year or with fine which may extend to fifty thousand rupees or with both, and

(b) for the second or subsequent offence with simple imprisonment which may extend to two year or with fine which may extend to one lakh rupees or with both.

**XXX XXX XXX**

Govt. Press, Vikasa Soudha, Bengalur, 3rd Mar, 2025, P7, W.D. , Copies 500

**(Provisionally admitted)**

**KARNATAKA LEGISLATIVE ASSEMBLY**
**(SIXTEENTH ASSEMBLY)**
**SIXTH SESSION**

Amendments to the Karnataka Money Lenders (Amendment)Bill, 2025 (LA Bill No.4 of 2025);

By Shri Kyathasandra N. Rajanna Minister for Co-operation Excluding Agricultural Marketing;

I hereby give notice of my intention to move the following amendment to theKarnataka Money Lenders (Amendment) Bill, 2025 (LA Bill No.4 of 2025, namely:-

**Clause-2**

In the said Bill, in clause 2, for the words “two years” the words “three years” shall be substituted.

**M.K.VISHALAKSHI**
Secretary